# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

ವಿಶೇಷ ರಾಜ್ಯ ಪತ್ರಿಕೆ

| ಭಾಗ–೪ಎ<br>Part – IVA | ಬೆಂಗಳೂರು, ಬುಧವಾರ, ೧೦, ಡಿಸೆಂಬರ್,೨೦೨೫ ( ಮಾರ್ಗಶಿರಾ,೧೯, ಶಕವರ್ಷ, ೧೯೪೭)<br>BENGALURU, WEDNESDAY, 10, DECEMBER, 2025 (MARGASHIRA, 19, SHAKAVARSHA, 1947) | ನಂ.೮೦೫<br>No. 805 |
|---|---|---|


**ಕರ್ನಾಟಕ ವಿಧಾನಸಭೆ**

**ಹದಿನಾರನೇ ವಿಧಾನಸಭೆ**

**ಎಂಟನೇ ಅಧಿವೇಶನ**

## ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ಪ್ರತಿಬಂಧಕ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–79)**

ದ್ವೇಷ ಭಾಷಣದ ಪ್ರಸರಣೆ, ಪ್ರಕಟಣೆ ಅಥವಾ ಪ್ರಚಾರವನ್ನು ಮತ್ತು ಸಮಾಜದಲ್ಲಿ ನಿರ್ದಿಷ್ಟ ವ್ಯಕ್ತಿ ಅಥವಾ ವ್ಯಕ್ತಿಗಳ ಸಮೂಹ ಅಥವಾ ಸಂಸ್ಥೆಗಳ ವಿರುದ್ಧ ಅಸಾಮರಸ್ಯ, ದ್ವೇಷವನ್ನು ಹುಟ್ಟಿಸುವಂಥ ಅಪರಾಧಗಳನ್ನು ಪ್ರತಿಬಂಧಿಸಲು ಮತ್ತು ತಡೆಗಟ್ಟಲು, ಹಾಗೂ ಅಂಥ ಅಪರಾಧಗಳಿಗೆ ದಂಡನೆಯನ್ನು ಉಪಬಂಧಿಸಲು ಮತ್ತು ಹಾನಿಗೊಳಗಾದ ಸಂತ್ರಸ್ತರಿಗೆ ತಕ್ಕ ಪರಿಹಾರವನ್ನು ಒದಗಿಸುವುದಕ್ಕಾಗಿ ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ದ್ವೇಷ ಭಾಷಣದ ಪ್ರಸರಣೆ, ಪ್ರಕಟಣೆ ಅಥವಾ ಪ್ರಚಾರವನ್ನು ಮತ್ತು ಸಮಾಜದಲ್ಲಿ ನಿರ್ದಿಷ್ಟ ವ್ಯಕ್ತಿ ಅಥವಾ ವ್ಯಕ್ತಿಗಳ ಸಮೂಹ ಅಥವಾ ಸಂಸ್ಥೆಗಳ ವಿರುದ್ಧ ಅಸಾಮರಸ್ಯ, ದ್ವೇಷವನ್ನು ಹುಟ್ಟಿಸುವಂಥ ಅಪರಾಧಗಳನ್ನು ಪ್ರತಿಬಂಧಿಸುವುದು ಮತ್ತು ತಡೆಗಟ್ಟುವುದು, ಹಾಗೂ ಅಂಥ ಅಪರಾಧಗಳಿಗೆ ದಂಡನೆಯನ್ನು ಉಪಬಂಧಿಸುವುದು ಮತ್ತು ಹಾನಿಗೊಳಗಾದ ಸಂತ್ರಸ್ತರಿಗೆ ತಕ್ಕ ಪರಿಹಾರವನ್ನು ಒದಗಿಸುವುದು ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ಪ್ರತಿಬಂಧಕ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಿದ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** (1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(i) **'ದ್ವೇಷ ಭಾಷಣ'** ಎಂಬುದು ಯಾವುದೇ ಪೂರ್ವಕಲ್ಪಿತ ಹಿತಾಸಕ್ತಿಯನ್ನು ಸಾಧಿಸಲು, ಬದುಕಿರುವ ವ್ಯಕ್ತಿ ಅಥವಾ ಮೃತ ವ್ಯಕ್ತಿಗಳ ವರ್ಗ ಅಥವಾ ಗುಂಪು ಅಥವಾ ಸಮುದಾಯದ ವಿರುದ್ಧ, ಹಾನಿ, ಅಸಾಮರಸ್ಯ ಅಥವಾ ವೈರತ್ವದ ಅಥವಾ ದ್ವೇಷದ ಅಥವಾ ಕೆಡುಕಿನ ಭಾವನೆಗಳನ್ನು ಮೂಡಿಸುವ ಉದ್ದೇಶದೊಂದಿಗೆ ಸಾರ್ವಜನಿಕ ನೋಟದಲ್ಲಿ, ಮೌಖಿಕವಾಗಿ ಅಥವಾ ಲಿಖಿತ ರೂಪದ ಪದಗಳಲ್ಲಿ ಅಥವಾ ಸಂಕೇತಗಳ ಮೂಲಕ ಅಥವಾ ದೃಶ್ಯರೂಪಕಗಳ ಮೂಲಕ ಅಥವಾ ವಿದ್ಯುನ್ಮಾನ ಸಂವಹನಗಳ ಮೂಲಕ ಅಥವಾ ಇನ್ನಾವುದೇ ರೀತಿಯಲ್ಲಿ ಮಾಡಲಾದ, ಪ್ರಕಟಿಸಲಾದ, ಪರಿಚಲಿಸಲಾದ ಯಾವುದೇ ಅಭಿವ್ಯಕ್ತಿಯನ್ನು ಒಳಗೊಳ್ಳುವುದು;

(ii) **'ಪೂರ್ವಕಲ್ಪಿತ ಹಿತಾಸಕ್ತಿ'** ಎಂಬುದು,

(ಎ) ಧರ್ಮ,

(ಬಿ) ಜನಾಂಗ,

(ಸಿ) ಜಾತಿ ಅಥವಾ ಸಮುದಾಯ

(ಡಿ) ಲಿಂಗ,

(ಇ) ಲಿಂಗತ್ವ,

(ಎಫ್) ಲೈಂಗಿಕ ಮನೋಗುಣ, (sexual orientation)

(ಜಿ) ಜನ್ಮ ಸ್ಥಳ,

(ಎಚ್) ವಾಸ ಸ್ಥಳ,

(ಐ) ಭಾಷೆ,

(ಜೆ) ನ್ಯೂನತೆ, ಅಥವಾ

(ಕೆ) ಪಂಗಡ,

- ಇವುಗಳ ಆಧಾರದ ಮೇಲಿನ ಪೂರ್ವಗ್ರಹವನ್ನು ಒಳಗೊಳ್ಳುವುದು.

(iii) **'ದ್ವೇಷ ಅಪರಾಧ'** ಎಂಬುದು, ಬದುಕಿರುವ ಅಥವಾ ಮೃತನಾದ ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳ ಸಮೂಹ ಅಥವಾ ಸಂಸ್ಥೆಯ ವಿರುದ್ಧ ಅಸಾಮರಸ್ಯ ಅಥವಾ ಹಗೆತನ ಅಥವಾ ದ್ವೇಷ ಅಥವಾ ಕೆಡುಕಿನ ಭಾವನೆಗಳನ್ನು ಮೂಡಿಸಲು, ದ್ವೇಷ ಭಾಷಣವನ್ನು ಮಾಡುವ, ಪ್ರಕಟಿಸುವ ಅಥವಾ ಪರಿಚಲನೆ ಮಾಡುವ ಮೂಲಕ ಅಂಥ ದ್ವೇಷ ಭಾಷಣವನ್ನು ಪ್ರಚಾರ ಮಾಡುವ, ವ್ಯಾಪಕಗೊಳಿಸುವ, ಪ್ರಚೋದಿಸುವ ಅಥವಾ ದುಷ್ಪ್ರೇರಿಸುವ ಅಥವಾ ಅದಕ್ಕೆ ಪ್ರಯತ್ನಿಸುವ ಮೂಲಕ ಅಂಥ ದ್ವೇಷ ಭಾಷಣ ಸಂವಹನದ ಯಾವುದೇ ಕೃತ್ಯವನ್ನು ಒಳಗೊಳ್ಳುವುದು; ಮತ್ತು

(iv) **'ಸಂವಹನ'** ಎಂಬುದು ಸಾರ್ವಜನಿಕರ ದೃಷ್ಟಿಗೆ ಬೀಳುವಂತೆ ಮೌಖಿಕ, ಮುದ್ರಣ, ಪ್ರಕಟಣೆ, ವಿದ್ಯುನ್ಮಾನ ವಿಧಾನಗಳ ಮೂಲಕ ಅಥವಾ ಅಂಥ ಇತರ ವಿಧಾನಗಳ ಮೂಲಕ ಅಂಥ

ಅಭಿವ್ಯಕ್ತಿಯ ಸಂವಹನವನ್ನು ತಿಳಿಹೇಳುವುದಕ್ಕಾಗಿ ಮಾಡಲಾದ ಅಭಿವ್ಯಕ್ತೀಯ ಸಂವಹನವನ್ನು (communication of expression) ಒಳಗೊಳ್ಳುವುದು.

(2) ಈ ಅಧಿನಿಯಮದಲ್ಲಿ ಬಳಸಿರುವ ಆದರೆ ಪರಿಭಾಷಿಸದಿರುವ, ಆದರೆ ಭಾರತೀಯ ನ್ಯಾಯ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 45) ಅಥವಾ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 46) ಅಥವಾ ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000 (2000ದ ಕೇಂದ್ರ ಅಧಿನಿಯಮ 21) ಈ ಅಧಿನಿಯಮಗಳಲ್ಲಿ ಪರಿಭಾಷಿಸಿರುವ ಪದಗಳು ಮತ್ತು ಪದಾವಳಿಗಳು ಅವುಗಳಿಗೆ ನೀಡಲಾದ ಅವೇ ಅರ್ಥಗಳನ್ನು ಅನುಕ್ರಮವಾಗಿ ಹೊಂದಿರತಕ್ಕದ್ದು.

**3. ದ್ವೇಷ ಅಪರಾಧಕ್ಕಾಗಿ ದಂಡನೆ.-** (1) ಯಾರೇ ವ್ಯಕ್ತಿಯು,-

(i) ದ್ವೇಷ ಅಪರಾಧವನ್ನು ಎಸಗಿದರೆ ಆತನು, ಒಂದು ವರ್ಷಕ್ಕೆ ಕಡಿಮೆಯಲ್ಲದ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದೊಂದಿಗೆ, 50,000/- ರೂಪಾಯಿಗಳ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು; ಮತ್ತು

(ii) ಯಾವುದೇ ತದನಂತರದ ಅಥವಾ ಪುನರಾವರ್ತಿತ ಅಪರಾಧಗಳಿಗಾಗಿ, ಎರಡು ವರ್ಷಗಳಿಗೆ ಕಡಿಮೆಯಲ್ಲದ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದೊಂದಿಗೆ, 1,00,000/- ರೂಪಾಯಿಗಳ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು.

(2) ಅಪರಾಧದ ಪರಿಣಾಮದ ತೀವ್ರತೆಯ ಆಧಾರದ ಮೇಲೆ ದ್ವೇಷ ಅಪರಾಧದಿಂದಾಗಿ ಸಂತ್ರಸ್ತನಿಗೆ ಉಂಟಾದ ಹಾನಿಯನ್ನು ಲೆಕ್ಕಹಾಕುವ ಮೂಲಕ ನ್ಯಾಯಾಲಯವು, ಆತನಿಗೆ ತಕ್ಕಷ್ಟು ಪರಿಹಾರವನ್ನು ನೀಡಬಹುದು.

(3) ಈ ಅಧಿನಿಯಮದ ಅಡಿಯಲ್ಲಿನ ದ್ವೇಷ ಅಪರಾಧಗಳು ಸಂಜ್ಞೇಯವಾಗಿರತಕ್ಕದ್ದು, ಜಾಮೀನು ರಹಿತವಾಗಿರತಕ್ಕದ್ದು ಹಾಗೂ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟರ ಮೂಲಕ ಅಧಿವಿಚಾರಣೆಗೆ ಒಳಪಡತಕ್ಕದ್ದು.

(4) ವಿದ್ಯುನ್ಮಾನ ಅಥವಾ ಅನ್ಯಥಾ ಯಾವುದೇ ರೂಪದಲ್ಲಿರುವ ಪುಸ್ತಕ, ಕರಪತ್ರ, ಕಾಗದ, ಬರಹ, ರೇಖಾಚಿತ್ರ, ವರ್ಣಚಿತ್ರ ರೂಪಕ ಅಥವಾ ಚಿತ್ರಗಳ ಪ್ರಕಟಣೆಯು, ವಿಜ್ಞಾನ, ಸಾಹಿತ್ಯ, ಕಲೆ ಅಥವಾ ಕಲಿಕೆ ಅಥವಾ ಸಾಮಾನ್ಯ ವಿಷಯಗಳಿಗೆ ಸಂಬಂಧಿಸಿದ ಉದ್ದೇಶಗಳ ಹಿತಾಸಕ್ತಿಯಲ್ಲಿದೆ ಎಂಬ ಆಧಾರದ ಮೇಲೆ ಅಂಥ ಪುಸ್ತಕ, ಕರಪತ್ರ, ಕಾಗದ, ಬರಹ, ರೇಖಾಚಿತ್ರ, ವರ್ಣಚಿತ್ರ ರೂಪಕ ಅಥವಾ ಚಿತ್ರಗಳು ಜನಹಿತಕ್ಕಾಗಿ ಇರುವುದೆಂದು ಸಮರ್ಥನೀಯವಾಗಿ ರುಜುವಾತಾಗಿರುವ ಅಥವಾ ಸದ್ಭಾವನಾಪೂರ್ವಕವಾಗಿ ಪರಂಪರೆ ಅಥವಾ ಧಾರ್ಮಿಕ ಉದ್ದೇಶಗಳಿಗಾಗಿ ಇಡಲಾಗಿರುವ ಅಥವಾ ಬಳಕೆಯಲ್ಲಿರುವಂತವುಗಳಿಗೆ ಸದರಿ ಉಪಬಂಧಗಳನ್ನು ವಿಸ್ತರಿಸತಕ್ಕದ್ದಲ್ಲ.

**4. ಕಾನೂನು ಮತ್ತು ಸುವ್ಯವಸ್ಥೆಯ ಆಡಳಿತ ವ್ಯವಸ್ಥೆಯು ತೆಗೆದುಕೊಳ್ಳಬೇಕಾದ ಪ್ರತಿಬಂಧಕ ಕ್ರಮಗಳು.-** (1) ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ಅಥವಾ ವಿಶೇಷ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ಅಥವಾ ಉಪ ಪೋಲಿಸ್ ವರಿಷ್ಠಾಧಿಕಾರಿ ದರ್ಜೆಗಿಂತ ಕಡಿಮೆಯಲ್ಲದ ಯಾರೇ ಪೋಲಿಸ್ ಅಧಿಕಾರಿಯು ಮಾಹಿತಿ ಸ್ವೀಕರಿಸಿದ ಮೇಲೆ ಮತ್ತು ಅವನು ಅಗತ್ಯವೆಂದು ಭಾವಿಸಬಹುದಾದಂಥ

ವಿಚಾರಣೆಯ ತರುವಾಯ, ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳ ಒಳಗೆ ಓರ್ವ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪು ಈ ಅಧಿನಿಯಮದಡಿಯಲ್ಲಿನ ಅಪರಾಧವನ್ನು ಮಾಡುವ ಸಂಭವವಿದೆಯೆಂದು ಅಥವಾ ಯಾವುದೇ ಅಪರಾಧವನ್ನು ಮಾಡುವುದಾಗಿ ಬೆದರಿಕೆಯೊಡ್ಡಿರುವುದನ್ನು ನಂಬಲು ಕಾರಣವಿದ್ದರೆ ಮತ್ತು ವ್ಯವಹರಣೆ ನಡೆಸಲು ಪರ್ಯಾಪ್ತ ಕಾರಣವನ್ನು ಹೊಂದಿರುವ ಅಭಿಪ್ರಾಯಕ್ಕೆ ಬಂದರೆ, ಶಾಂತಿ ಮತ್ತು ಸದ್ವರ್ತನೆಯನ್ನು ಪಾಲಿಸಲು ಮತ್ತು ಸಾರ್ವಜನಿಕ ಸುವ್ಯವಸ್ಥೆ ಮತ್ತು ಶಾಂತಿಯನ್ನು ಕಾಪಾಡಲು ಅಗತ್ಯ ಪ್ರತಿಬಂಧಕ ಕ್ರಮವನ್ನು ಕೈಗೊಳ್ಳಬಹುದು.

(2) ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 46)ರ ಅಧ್ಯಾಯ-IXರ ಉಪಬಂಧಗಳು ಸಾಧ್ಯವಾದಷ್ಟರ ಮಟ್ಟಿಗೆ ಉಪ-ಪ್ರಕರಣ (1)ರ ಉದ್ದೇಶಗಳಿಗಾಗಿ ಅನ್ವಯವಾಗಬಹುದು.

**5. ಸಂಘ ಮತ್ತು ಸಂಸ್ಥೆಯಿಂದ ಅಪರಾಧಗಳು.-** ಈ ಅಧಿನಿಯಮದಡಿಯಲ್ಲಿ ಅಪರಾಧವನ್ನು ಎಸಗುವ ವ್ಯಕ್ತಿಯು ಸಂಘ ಅಥವಾ ಸಂಸ್ಥೆಯಾಗಿದ್ದಲ್ಲಿ, ಅಪರಾಧವನ್ನು ಎಸಗಿದ ಸಮಯದಲ್ಲಿ ಅಂಥ ಸಂಘ ಅಥವಾ ಸಂಸ್ಥೆಯ ಸದರಿ ವ್ಯವಹಾರದ ಪ್ರಭಾರೆಯಲ್ಲಿದ್ದ ಮತ್ತು ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿ, ಜೊತೆಗೆ ಅಂಥ ಸಂಘ ಅಥವಾ ಸಂಸ್ಥೆಯೂ ಅಪರಾಧದ ತಪ್ಪಿತಸ್ಥರೆಂದು ಪರಿಗಣಿಸತಕ್ಕದ್ದು ಮತ್ತು ಅವರ ವಿರುದ್ಧ ವ್ಯವಹರಣೆ ನಡೆಸಲು ಮತ್ತು ದಂಡನೆಗೊಳಪಡಿಸಲು ಜವಾಬ್ದಾರರಾಗಿರತಕ್ಕದ್ದು.

ಪರಂತು, ಅಪರಾಧವು ಅವನ ಅರಿವಿಗೆ ಬಾರದೇ ನಡೆದಿದೆ ಅಥವಾ ಅಂಥ ಅಪರಾಧವನ್ನು ತಡೆಯಲು ಅವನು ಎಲ್ಲ ಯುಕ್ತ ಜಾಗರೂಕತೆಯನ್ನು ವಹಿಸಿರುವುದನ್ನು ಸಾಬೀತು ಪಡಿಸಿದಲ್ಲಿ, ಈ ಪ್ರಕರಣದಲ್ಲಿರುವ ಯಾವುದೂ ಯಾರೇ ವ್ಯಕ್ತಿಯನ್ನು ದಂಡನೆಗೆ ಹೊಣೆಗಾರನನ್ನಾಗಿ ಮಾಡತಕ್ಕದ್ದಲ್ಲ.

**ವಿವರಣೆ:** ಈ ಪ್ರಕರಣದ ಉದ್ದೇಶಕ್ಕಾಗಿ 'ಸಂಘ ಅಥವಾ ಸಂಸ್ಥೆ' ಎಂಬುದು ನೋಂದಾಯಿತ ಅಥವಾ ನೋಂದಾಯಿತವಲ್ಲದ ವ್ಯಕ್ತಿಗಳ ಸಂಘ ಅಥವಾ ಸಂಸ್ಥೆಯನ್ನು ಒಳಗೊಳ್ಳುವುದು.

**6. ದ್ವೇಷ ಅಪರಾಧದ ವಿಷಯವಸ್ತುಗಳನ್ನು ಬ್ಲಾಕ್ ಮಾಡುವ ಅಥವಾ ತೆಗೆದು ಹಾಕುವ ಅಧಿಕಾರ.-** ಗೊತ್ತುಪಡಿಸಿದ ಅಧಿಕಾರಿಯು, ಸರ್ಕಾರವು ಅಧಿಸೂಚಿಸಿದಂತೆ ಯಾರೇ ಸೇವಾದಾತ, ಮಧ್ಯವರ್ತಿ, ವ್ಯಕ್ತಿ ಅಥವಾ ಸಂಸ್ಥೆಗೆ ವಿದ್ಯುನ್ಮಾನ ಮಾಧ್ಯಮವನ್ನೂ ಒಳಗೊಂಡಂತೆ ತನ್ನ ಡೊಮೇನ್‌ನಿಂದ ದ್ವೇಷ ಅಪರಾಧದ ವಿಷಯವಸ್ತುಗಳನ್ನು ಬ್ಲಾಕ್ ಮಾಡಲು ಅಥವಾ ತೆಗೆದು ಹಾಕಲು ನಿರ್ದೇಶಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

**7. ಬೇರೆ ಕಾನೂನುಗಳ ಅನ್ವಯವು ಪ್ರತಿಬಂಧಿತವಲ್ಲ.-** (1) ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನುಗಳ ಉಪಬಂಧಗಳ ಜತೆಗೆ ಇರತಕ್ಕದ್ದೇ ಹೊರತು ಅವುಗಳನ್ನು ಅಲ್ಪೀಕರಿಸತಕ್ಕದ್ದಲ್ಲ.

(2) ಭಾರತೀಯ ನ್ಯಾಯ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 45) ಮತ್ತು ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000 (2000ರ ಕೇಂದ್ರ ಅಧಿನಿಯಮ 21) ಇವುಗಳಲ್ಲಿನ ಪದಾವಳಿಗಳ ಪರಿಭಾಷೆಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಈ ಅಧಿನಿಯಮಕ್ಕೆ ಅನ್ವಯವಾಗುತ್ತವೆ.

**8. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.-** ಈ ಅಧಿನಿಯಮ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಅಡಿಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ

ಯಾವುದೇ ಸರ್ಕಾರಿ ನೌಕರನ ವಿರುದ್ಧ ಯಾವುದೇ ದಾವೆಯನ್ನು, ಅಭಿಯೋಜನೆಯನ್ನು ಅಥವಾ ಇತರ ಕಾನೂನು ಕ್ರಮವನ್ನು ಹೂಡತಕ್ಕದ್ದಲ್ಲ.

**9. ತೊಂದರೆಗಳನ್ನು ನಿವಾರಿಸುವ ಅಧಿಕಾರ.-** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ, ಯಾವುದೇ ತೊಂದರೆ ಉದ್ಭವಿಸಿದರೆ, ಆ ತೊಂದರೆಯ ನಿವಾರಣೆಗಾಗಿ, ಈ ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಲಾದ ಆದೇಶದ ಮೂಲಕ ಅಂಥ ಉಪಬಂಧಗಳನ್ನು ಕಲ್ಪಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಮೂರು ವರ್ಷಗಳ ಅವಧಿ ಮುಕ್ತಾಯವಾದ ತರುವಾಯ ಈ ಪ್ರಕರಣದ ಅಡಿಯಲ್ಲಿ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

**10. ನಿಯಮಗಳ ರಚನಾಧಿಕಾರ.-** (1) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಪೂರ್ವ ಪ್ರಕಟಣೆಯ ತರುವಾಯ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚಿನ ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನಗಳ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮೊದಲು ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಉಭಯ ಸದನಗಳೂ ಒಪ್ಪಿದರೆ ಅಥವಾ ಆ ನಿಯಮ ಮಾಡಕೂಡದೆಂದು ಉಭಯ ಸದನಗಳೂ ಒಪ್ಪಿದರೆ, ನಿಯಮವು ಆ ಮಾರ್ಪಾಟನ್ನು ಅಥವಾ ರದ್ದತಿಯನ್ನು ಅಧಿಸೂಚಿಸಿದ ದಿನಾಂಕದಿಂದ ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಸಂದರ್ಭಾನುಸಾರವಾಗಿ ಯಾವುದೇ ಪರಿಣಾಮ ಹೊಂದಿರತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಅಡಿಯಲ್ಲಿ ಹಿಂದೆ ಮಾಡಿದ ಯಾವುದೇ ಕೃತ್ಯದ ಸಿಂಧುತ್ವಕ್ಕೆ ಬಾಧಕವಾಗತಕ್ಕದ್ದಲ್ಲ.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಈ ಮುಂದಿನವುಗಳಿಗಾಗಿ,-

(i) ವ್ಯಕ್ತಿ, ವ್ಯಕ್ತಿಗಳ ಸಮೂಹ, ಸಂಸ್ಥೆಗಳ ವಿರುದ್ಧ ಸಮಾಜದಲ್ಲಿ ಅಸಾಮರಸ್ಯ, ದ್ವೇಷವನ್ನುಂಟು ಮಾಡುವ ದ್ವೇಷಭಾಷಣದ ಪ್ರಸರಣೆ, ಪ್ರಕಟಣೆ ಅಥವಾ ಪ್ರಚಾರವನ್ನು ಹಾಗೂ ಅಪರಾಧಗಳನ್ನು ತಡೆಗಟ್ಟಲು ಮತ್ತು ಪ್ರತಿಬಂಧಿಸಲು;

(ii) ಅಂಥ ಅಪರಾಧಗಳಿಗೆ ದಂಡನೆಯನ್ನು ಉಪಬಂಧಿಸಲು; ಹಾಗೂ

(iii) ಹಾನಿಗೊಳಗಾದ ಸಂತ್ರಸ್ತರಿಗೆ ತಕ್ಕಷ್ಟು ಪರಿಹಾರವನ್ನು ಒದಗಿಸಲು,

- ಶಾಸನವನ್ನು ಅಧಿನಿಯಮಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದ ಯಾವುದೇ ಹೆಚ್ಚಿನ ವೆಚ್ಚವು ಉಂಟಾಗುವುದಿಲ್ಲ.

## ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತು ಜ್ಞಾಪನ ಪತ್ರ

| | |
|---|---|
| **ಖಂಡ- 10** | ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನೆಯ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿರುತ್ತದೆ.

**ಡಾ. ಜಿ. ಪರಮೇಶ್ವರ**
ಗೃಹ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

**KARNATAKA LEGISLATIVE ASSEMBLY**

**SIXTEENTH LEGISLATIVE ASSEMBLY**

**EIGHTH SESSION**

# The Karnataka Hate Speech and Hate Crimes (Prevention) Bill, 2025
## (LA Bill No. 79 of 2025)

A Bill to curb and prevent dissemination, publication or promotion of hate speech and crimes, which cause disharmony, hatred in the society, against the person or group of persons, organisations and provide punishment to such crimes and to provide adequate compensation to the injured victims.

Whereas it is expedient to curb and prevent dissemination, publication or promotion of hate speech and crimes, which cause disharmony, hatred in the society, against the person or group of persons, organisations and provide punishment to such crimes and to provide adequate compensation to the injured victims and for matters connected therewith for the purposes hereinafter appearing.

Be it enacted by the Karnataka State Legislature in the seventy sixth year of the Republic of India, as follows:-

**1. Short title and commencement.-**(1) This Act may be called the Karnataka Hate Speech and Hate Crimes (Prevention) Act, 2025.

(2) It shall come into force on such date as the State Government may appoint, by notification in the Official Gazette.

**2. Definitions.-** (1) In this Act, unless the context otherwise requires,-

**(i) 'Hate Speech'** includes any expression which is made, published, or circulated, in words either spoken or written or by signs or by visible representations or through electronic communication or otherwise, in public view, with an intention to cause injury, disharmony or feelings of enmity or hatred or ill-will against person alive or dead, class or group of persons or community, to meet any prejudicial interest;

**(ii) 'Prejudicial interest'** means and includes, the bias on the grounds of ,-

(a) religion,

(b) race,

(c) caste or community;

(d) sex,

(e) gender,

(f) sexual orientation,

(g) place of birth,

(h) residence,

(i) language,

(j) disability, or

(k) tribe;

**(iii) 'Hate Crime'** means communication of hate speech, by making, publishing or circulating or any act of promoting, propagating, inciting or abetting or attempting, such hate speech, to cause disharmony or feelings of enmity or hatred or ill-will against any person dead or alive or group of persons or organisation; and

**(iv) 'Communication'** means and includes communication of expression, made in public view, by way of verbal, print, publication, electronic means, or other means to convey such expression.

(2) The words and expressions used and not defined in this Act but defined in the Bharatiya Nyaya Sanhita, 2023 (Central Act 45 of 2023) or the Bharatiya Nagarik Suraksha Sanhita, 2023 (Central Act 46 of 2023) or the Information Technology Act, 2000 (Central Act 21 of 2000) shall have meaning respectively assigned to them in those Acts.

**3. Punishment for hate crime.-** (1) Whoever,-

(i) commits hate crime shall be punished with imprisonment for a term which shall not be less than one year, which may extend to seven years with a fine of Rs.50,000/-; and

(ii) for any subsequent or repetetive offences the punishment shall not be less than two years, which may extend to ten years with fine of Rs.1,00,000/-.

(2) The Court may award adequate compensation to the victim by calculating the injury caused due to hate crime, depending upon the gravity of the impact of the crime.

(3) The offences under this Act shall be cognizable, non bailable and triable by the Judicial Magistrate First Class.

(4) The said provisions shall not extend to any book, pamphlet, paper, writing, drawing, painting representation or figure in electronic form or otherwise the publication

of which is proved to be justified as being for the public good on the ground that such book, pamphlet, paper, writing drawing, painting representation or figure is in the interest of science, literature, art or learning or other objects of general concern; or which is kept or used for bona fide heritage or religious purposes.

**4. Preventive action to be taken by the law and order machinery.-** (1) Executive Magistrate or Special Executive Magistrate or any police officer not below the rank of a Deputy Superintendent of Police may, on receiving information and after such inquiry as he may think necessary, has reason to believe that a person or a group of persons within the local limits of his jurisdiction is likely to commit an offence or has threatened to commit any offence under this Act and is of the opinion that there is sufficient ground for proceeding, take necessary preventive action for keeping the peace and good behaviour and maintenance of public order and tranquillity.

(2) The provisions of Chapter-IX of the Bhartiya Nagarik Suraksha Sanhita, 2023 (Central Act 46 of 2023) so far as may be, apply for the purposes of sub-section (1).

**5. Offences by Organisation or Institution.-** If the person, committing an offence under this Act, is an Organisation or Institution, every person who, at the time of the offence committed, was in charge of, and was responsible to, such organisation or institution for the conduct of the business of the same , as well as such Organisation or Institution, shall be deemed to be guilty of the offence and shall be liable to be proceeded against and punished accordingly:

Provided that nothing contained in this section shall render any person liable to punishment if he proves that the offence was committed without his knowledge, or that he had exercised all due diligence to prevent the commission of such offence.

**Explanation:** For the purpose of this section 'Organisation or Institution' means and includes association of persons whether registered or not.

**6. Power to block or remove the hate crime materials.-** The Designated officer, as notified by the State Government, shall have the power to direct any service provider, intermediaries, person or entity to block or remove the hate crime materials from its domain including electronic media.

**7. Application of other laws not barred.-** (1) The provisions of this Act shall be in addition to, and not in derogation of, the provisions of any other law for the time being in force.

(2) The definitions of the terms in the Bhartiya Nyaya Sanhita, 2023 (Central Act 45 of 2023) and the Information Technology Act, 2000 (Central Act 21 of 2000) are mutatis-mutandis applicable to this Act.

**8. Protection of action taken in good faith.-** No suit, prosecution or other legal proceedings shall lie against public servants for anything which is done in good faith or intended to be done under this Act, or the rules made thereunder.

**9. Power to remove difficulties.-** If any difficulty arises in giving effect to the provisions of this Act, the State Government may, by order published in the Official Gazette, make such provisions, to remove such difficulty:

Provided that no such order shall be made under this section after the expiry of three years from the commencement of this Act.

**10. Power to make rules.-** (1) The State Government may, by notification, after previous publication, make rules to carry out the purposes of this Act.

(2) Every rule made under this Act shall be laid as soon as may be after it is made before each House of the State Legislature while it is in session for a total period of thirty days which may be comprised in one session or in two or more successive sessions, and if, before the expiry of the session in which it is so laid or the session immediately following, both Houses agree in making any modification in the rule or both Houses agree that the rule should not be made, the rule shall thereafter have effect only in such modified form or to be of no effect as the case may be; so, however, that any such modification or annulment shall be without prejudice to the validity of anything done under that rule.

## STATEMENT OF OBJECTS AND REASONS

It is considered necessary to enact a legislation to,-

(i) curb and prevent dissemination, publication or promotion of hate speech and crimes, which cause disharmony, hatred in the society, against the person or group of persons, organisations;

(ii) provide punishment to such crimes; and

(iii) provide adequate compensation to the injured victims.

Hence, the Bill.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



## FINANCIAL MEMORANDUM

There is no extra expenditure involved in the proposed legislative measure.

## MEMORANDUM REGARDING DELEGATED LEGISLATION

| | |
|---|---|
| Clause-10 | Empowers the State Government to make rules regarding to carry out the purposes of the Act. |

The proposed delegation of legislative power is normal in character.

**Dr. G. PARAMESHWARA**
Minister for Home

**M.K. VISHALAKSHI**
Secretary
Karnataka Legislative Assembly

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH